# ಒಟ್ಟಂದ ಕೃಷಿ

# ಒಪ್ಪಂದ ಕೃಷಿ

ಭಾರತದಲ್ಲಿ ಕೃಷಿಯು ರೈತರ ಮುಖ್ಯ ಕಸುಬಾಗಿದ್ದು ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಮುಖ್ಯ ಪಾತ್ರವಹಿಸಿದೆ. ಆದರೆ ವಾಸ್ತವದಲ್ಲಿ ಜಾಗತೀಕರಣ ಮತ್ತು ಉದಾರಿಕರಣ ನೀತಿಯಲ್ಲಿ ಕೃಷಿಯು ಕ್ಲಿಷ್ಟ ಪರಿಸ್ಥಿತಿಯಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಹಲವಾರು ಹೊಸ ಯೋಜನೆಗಳು ರೂಪುಗೊಳ್ಳುತ್ತಿದ್ದು ಭಾರತದ ಕೃಷಿ ಉತ್ಪನ್ನಗಳ ಬೆಲೆಯನ್ನು ಸ್ಥಿರವಾಗಿರಿಸಲು ಅಭಿವೃದ್ಧಿ ಪಡಿಸಿದಂತಹ ತಂತ್ರಜ್ಞಾನದೊಂದಿಗೆ ಮಾರುಕಟ್ಟೆಯನ್ನು ಪ್ರವೇಶಿಸಿದೆ. ಈ ಹಿಂದೆ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳನ್ನು ತರಲು ಸರ್ಕಾರ ಪ್ರಯತ್ನಗಳನ್ನು ಮಾಡುತ್ತಿದೆ. ಇದರಿಂದಾಗಿ ಒಪ್ಪಂದ ಆಧಾರಿತ ಕೃಷಿಗಾಗಿ ಹಲವಾರು ಸಂಸ್ಥೆಗಳು ಮುಂದೆ ಬಂದು ರೈತರ ಉತ್ಪನ್ನಗಳನ್ನು ಒಪ್ಪಂದದ ಆಧಾರದ ಮೇಲೆ ಕೊಂಡುಕೊಳ್ಳುತ್ತಿವೆ.

ಕೃಷಿಯಲ್ಲಿ ಬೇಡಿಕೆದಾರರ ಬೇಡಿಕೆಗೆ ಅನುಗುಣವಾಗಿ ಅವರಿಗೆ ಬೇಕಾದ ಗುಣಮಟ್ಟದ ಉತ್ಪನ್ನಗಳನ್ನು ನಿಗದಿತ ಕಾಲಕ್ಕೆ ಒಪ್ಪಂದ ಮಾಡಿಕೊಂಡು ಬೆಳೆದು ಕೊಡುವ ಪದ್ಧತಿಗೆ " ಒಪ್ಪಂದ ಕೃಷಿ" ಎನ್ನುತ್ತಾರೆ.

ಭಾರತದಲ್ಲಿ ಹಲವಾರು ಸಂಸ್ಥೆಗಳು ರೈತರೊಂದಿಗೆ ಒಪ್ಪಂದ ಕೃಷಿ ವ್ಯವಸ್ಥೆ ಏರ್ಪಡಿಸಿಕೊಂಡಿದೆ. ಪಂಜಾಬ್, ಹರಿಯಾಣ, ಉತ್ತರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಹಲವಾರು ಕಂಪನಿಗಳು ಬಾಸುಮತಿ ಭತ್ತ ಉತ್ಪಾದನೆ, ಕಡಲೇಕಾಯಿ, ಮಿಡಿ ಸೌತೆ/ ಗರ್ಕಿನ್, ಬೆಲ್ಲ ಮತ್ತು ಹತ್ತಿ ಉತ್ಪಾದನೆಯಲ್ಲಿ ಈ ವ್ಯವಸ್ಥೆ ನಡೆಸಿದೆ. ಈ ಒಪ್ಪಂದ ಕೃಷಿಯು ಕನಾಟಕದಲ್ಲಿಯೂ ಆರಭಗೊಂಡಿದ್ದು ರೈತರಿಗೆ ವರದಾನವಾಗಿದೆ. ಕರ್ನಾಟಕದಲ್ಲಿ ಹಿಮಾಲಯ ಡ್ರಗ್ ಕಂಪನಿ, ಹಿಂದೂಸ್ತಾನ್ ಲಿವರ್, ಕೋಹಿನೂರ್ ಎಕ್ಸ್‌ಪೋರ್ಟ್, ಗ್ರೀನ್ ಆಗ್ರೋಪ್ಯಾಕ್, ನಾಮಧಾರಿ, ಮೈಕೋ, ಎನ್.ಎಸ್.ಸಿ.,

ಕೆ.ಎಸ್.ಎಸ್.ಸಿ., ಕೆ. ಓ.ಎಫ್ ಮುಂತಾದ ಕಂಪನಿಯವರು ಗರ್ಕಿನ್ (ಮಿಡಿ ಸೌತೆ), ಟಮ್ಯಾಟೋ, ಕುದರೆ ಮಸಾಲೆಸೊಪ್ಪು, ಭತ್ತ ಮುಸುಕಿನ ಜೋಳ, ಸ್ವೀಟ್ ಕಾರ್ನ್, ಬೇಬಿಕಾರ್ನ್, ಪಾಪ್‌ಕಾರ್ನ್, ತರಕಾರಿ ಮುಂತಾದ ಬೆಳೆಗಳಲ್ಲಿ ಒಪ್ಪಂದ ಕೃಷಿ ಮಾಡುತ್ತಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಒಪ್ಪಂದ ಕೃಷಿ ಕೆಲವು ದಶಕಗಳಿಂದ ವಾಡಿಕೆಯಲ್ಲಿದ್ದು, ರೈತರು ನಿಗಧಿತ ಬೆಲೆಯಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬನ್ನು ಬೆಳೆದುಕೊಡುವ ಒಪ್ಪಂದ ವಾಡಿಕೆ ಇರುತ್ತದೆ. ಇದೇ ರೀತಿ ಬೀಜೋತ್ಪಾದನಾ ಕ್ಷೇತ್ರದಲ್ಲಿಯೂ ಸಹ ಒಪ್ಪಂದ ಕೃಷಿ ವಾಡಿಕೆಯಲ್ಲಿದೆ. ಇತ್ತೀಚೆಗೆ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಗಳಿಂದ ಹಲವಾರು ಬದಲಾವಣೆಗಳು ಆಗಲು ಅವಕಾಶವಾಯಿತು. ವಿಶ್ವ ವಾಣಿಜ್ಯ ಸಂಸ್ಥೆ, ಸರ್ಕಾರದ ಹೊಸ ಆರ್ಥಿಕ ನೀತಿ ಹಾಗೂ ಮುಕ್ತ ಮಾರುಕಟ್ಟೆ ವಾತಾವರಣ, ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಒದಗಿಸಿದೆ. ಇಂದು ರೈತನಿಗೆ ವಿವಿಧ ಬೆಳೆಗಳಲ್ಲಿನ ಅಧಿಕ ಇಳುವರಿ ತಳಿಗಳು ಹಾಗೂ ಹೈಬ್ರಿಡ್ ತಳಿಗಳು ಲಭ್ಯವಾಗುತ್ತಿದ್ದು, ಬಹು ರಾಷ್ಟ್ರೀಯ ಕಂಪನಿಗಳು ರೈತರೊಡನೆ ಜಂಟಿ ಕಾರ್ಯಾಚಟುವಟಿಕೆಯ ಮೂಲಕ ಒದಗಿಸುತ್ತಿವೆ. ಹಲವಾರು ಸಂಸ್ಥೆಗಳು ಒಪ್ಪಂದ ಕೃಷಿಯಡಿಯಲ್ಲಿ ಬಿಜೋತ್ಪಾದನೆಯನ್ನು ಕೈಗೊಳ್ಳುತ್ತಲಿವೆ. ಇದೇ ರೀತಿಯಲ್ಲಿ ಖಾಸಗಿ ಸಂಸ್ಥೆಗಳು ರಫ್ತಿಗೆ ಉತ್ತಮ ಬೇಡಿಕೆ ಇರುವಂತಹ ತೋಟಗಾರಿಕಾ ಉತ್ಪಾದನೆಯ ಬೆಳೆಗಳನ್ನು ಒಪ್ಪಂದ ಕೃಷಿಯಡಿಯಲ್ಲಿ ಬೆಳೆಯುವುದನ್ನು ರಾಜ್ಯದಲ್ಲಿ ಪರಿಚಯಿಸಿದೆ.

**ಒಪ್ಪಂದ ಕೃಷಿಯ ಕರಾರಿಗೆ ಅನುಗುಣವಾದ ಅಂಶಗಳು**

1. ನಿಗಧಿಪಡಿಸಲಾದ ಬೆಳೆ ( ತಳಿ) ಬೆಳೆಯುವುದು
2. ನಿಗಧಿತ ಅವಧಿಯಲ್ಲಿ ಬೆಳೆಯುವುದು
3. ನಿಗಧಿಪಡಿಸಲಾದ ಗುಣಮಟ್ಟದ ಉತ್ಪನ್ನ ಬೆಳೆಯುವುದು

4. ನಿಗಧಿಪಡಿಸಿದ ಪ್ರಮಾಣದಲ್ಲಿ ಉತ್ಪಾದಿಸುವುದು

5. ನಿಗಧಿಸಿದ ಕನಿಷ್ಠ ಮತ್ತು ಗರಿಷ್ಟ ವಿಸ್ತೀರ್ಣ ಬೆಳೆಯುವುದು.

6. ನಿರ್ಧರಿಸಿದ ದರದಲ್ಲಿ ಮಾರಾಟ ಮಾಡುವುದು

7. ನಿಗಧಿತ ಹಂಗಾಮಿನಲ್ಲಿ ಬೆಳೆಯುವುದು

**ಒಪ್ಪಂದ ಕೃಷಿಯಲ್ಲಿ ಮೂರು ಬಗೆಯಾಗಿ ಒಪ್ಪಂದ ಮಾಡಿಕೊಳ್ಳಬಹುದಾಗಿದೆ.**

**1. ಸಂಗ್ರಹಣೆ ಒಪ್ಪಂದ:**

ಇದರಡಿಯಲ್ಲಿ ಮಾರಾಟ ಮತ್ತು ಕೊಳ್ಳುವ ಬಗ್ಗೆ ನಿಬಂಧನೆಯನ್ನು ಮಾಡಿಕೊಳ್ಳಲಾಗುವುದು

**2. ಭಾಗಶಃ ಒಪ್ಪಂದ:**

ಬೇಸಾಯಕ್ಕೆ ಬೇಕಾಗುವ ಕೆಲವು ಪರಿಕರಗಳನ್ನು ಸಂಸ್ಥೆ ರೈತರಿಗೆ ಒದಗಿಸುವುದು ಮತ್ತು ಪೂರ್ವ ನಿರ್ಧಾರಿತ ಬೆಲೆಯಲ್ಲಿ ಕೈಗೊಳ್ಳುವುದು.

**3. ಒಟ್ಟು ಒಪ್ಪಂದ:**

ಒಪ್ಪಂದ ಕೃಷಿಯಲ್ಲಿ ಕೊಳ್ಳುವ ಸಂಸ್ಥೆ ಎಲ್ಲಾ ಕೃಷಿ ಪರಿಕರಗಳನ್ನು ಸರಬರಾಜು ಮಾಡುವುದು. ರೈತ ತನ್ನ ಜಮೀನು ಮತ್ತು ಶ್ರಮ ನೀಡುತ್ತಾನೆ.

**ಒಪ್ಪಂದ ಕೃಷಿಯಿಂದ ರೈತರಿಗೆ ಹಾಗೂ ಸಂಸ್ಕರಣಾ ಸಂಸ್ಥೆಯವರಿಗೆ ಹಲವಾರು ಪ್ರಯೋಜನಗಳು ಆಗುತ್ತವೆ.**

**1. ರೈತರಿಗಾಗುವ (ಬೆಳೆಗಾರನಿಗೆ) ಪ್ರಯೋಜನಗಳು:**

ಕಡಿಮೆ ಬಂಡವಾಳ ಹೂಡಿಕೆ (ಕೃಷಿ ಸಾಮಗ್ರಿಗಳ ವ್ಯವಸ್ಥೆ).

- ಬೆಳೆಗಾರನಿಗೆ ಬೆಲೆ ಏರಿಳಿತಗಳಿಂದ ರಕ್ಷಣೆ (ಬೆಲೆ ಗಂಡಾಂತರ ನಿವಾರಣೆ).

- ಬೆಳೆಗಾರನಿಗೆ ಮಾರಾಟ ಅನುಕೂಲ

- ರೈತರಿಗೆ ಸುಧಾರಿಸಿದ ಸಾಲದ ಅನುಕೂಲ (ವ್ಯವಸ್ಥೆ).

- ಬೆಳೆಗಾರನಿಗೆ ಖಾತ್ರಿಯಾದ ಆದಾಯ.

- ಬೆಳೆಗಾರನಿಗೆ ವಿಸ್ತರಣಾ ಕಾರ್ಯಕರ್ತರಿಂದ ತಾಂತ್ರಿಕ ನೆರವು

- ಬೆಳೆಗಾರನಿಗೆ ಸಿಮಿತ ಪ್ರದೇಶದಲ್ಲಿ ವೈವಿಧ್ಯತೆ ಅಳವಡಿಕೆ.

- ಒಪ್ಪಂದ ಕೃಷಿಯಡಿಯಲ್ಲಿ ಸಣ್ಣ ಹಿಡುವಳಿದಾರರು ಒಂದಾಗಿ ಕಾರ್ಯನಿರ್ವಹಿಸಿ ಕಚ್ಚಾವಸ್ತುಗಳನ್ನು ಸರಬರಾಜು ಮಾಡಬಹುದಾಗಿದೆ.

- ಕುಟುಂಬದ ಸದಸ್ಯರೆಲ್ಲರಿಗೂ ಉದ್ಯೋಗ ಕಲ್ಪನೆ.

- ರೈತರಿಗೆ ವಾಣಿಜ್ಯತೆಯ ಬಗ್ಗೆ ಅರಿವು ಮೂಡಿಸುವುದು.

- ವ್ಯಾಪಾರಸ್ಥರ ಹಾಗೂ ಮಧ್ಯವರ್ತಿಗಳ ಹಾವಳಿ ಹೋಗಲಾಡಿಸಬಹುದು.

### 3. ಸಂಸ್ಕರಣಾ ಸಂಸ್ಥೆಗೆ ( ಕಂಪನಿಯವರಿಗೆ ) ಆಗುವ ಪ್ರಯೋಜನಗಳು

- ಜಮೀನ್ನು ಕೊಳ್ಳಲು ಬಂಡವಾಳ ಹಾಕುವಂತಿಲ್ಲ
- ಸಂಕಷ್ಟಗಳಿಗೆ ಗುರಿಯಾಗುವುದರಿಂದ ರಕ್ಷನೆ.
- ಯೋಜನೆಯಂತೆ ಸಮಯಕ್ಕೆ ಸರಿಯಾಗಿ ಉತ್ಪನ್ನಗಳ ತಯಾರಿಕೆ ಹಾಗೂ ಹೆಚ್ಚಿನ ದಕ್ಷತೆಯಲ್ಲಿ ಮಾರಾಟ ಮಾಡಬಹುದು.
- ಸಂಸ್ಥೆಯ ಒಟ್ಟು ಉದ್ಯೋಗ ಬೇಡಿಕೆ ಲೆಕ್ಕ ಮಾಡಬಹುದು.

ಒಪ್ಪಂದ ಕೃಷಿಯ ಮೂಲಕ ಹಲವಾರು ಹಳ್ಳಿಗಳಲ್ಲಿ ಪ್ರಗತಿಪರ ರೈತರನ್ನು ಸಾಮನ್ಯ ರೈತರು ಅನುಕರಣೆ ಮಾಡುವುದು ಕಂಡುಬರುತ್ತಿದೆ. ಇದರಿಂದ ರೈತರು ಹೆಚ್ಚಿನ ವಿಷಯಗಳು ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡುವಲ್ಲಿ ಸಫಲರಾಗಿದ್ದಾರೆ.